'ಪಠ್ಯಕ್ರಮ ಒತ್ತಟ್ಟಿಗಿರಲಿ !
ಮಕ್ಕಳಿಗೆ ನಾವು ಮೂಲಭೂತ ವಿಷಯಗಳನ್ನು ಕಲಿಸೋಣ.'

ರಮೇಶ್ ಚಂದ್ರ ಪಾಲ್

ಸರ್ಕಾರಿ ಉತ್ಕೃಷ್ಟ ಹಿರಿಯ ಪ್ರಾಥಮಿಕ ಶಾಲೆ
ಮೀತನ್, ರೇವಧರ್ ಬ್ಲಾಕ್, ಸಿರೋಹಿ ಜಿಲ್ಲೆ, ರಾಜಸ್ಥಾನ

ಮೀತನ್ ಹಳ್ಳಿ ರೇವಧರ್ ಬ್ಲಾಕ್‌ನಲ್ಲಿದ್ದು ಸಿರೋಹಿ ಪಟ್ಟಣದಿಂದ ಅರವತ್ತು ಕಿ.ಮೀ. ದೂರದಲ್ಲಿದೆ. ಸಿರೋಹಿ ಅದರ ಜಿಲ್ಲಾ ಕೇಂದ್ರ. ಅದಕ್ಕೆ ಅತ್ಯಂತ ಸಮೀಪವಿರುವ ಪಟ್ಟಣವೆಂದರೆ ಸುಮಾರು ಮೂವತ್ತು ಕಿ.ಮೀ. ದೂರದಲ್ಲಿರುವ ಅಬೂ ರೋಡ್. ಈ ರಸ್ತೆಯ ಎರಡೂ ಬದಿಗಳಲ್ಲಿ ಸಿರೋಹಿ ಜಿಲ್ಲೆಯ ಬಹುತೇಕ ಕೃಷಿ ಭೂಮಿಯಿದೆ. ಮೀತನ್‌ಗೆ ಹೋಗುವ ಹಾದಿಯಲ್ಲಿ ಕಣ್ಣು ಹಾಯಿಸಿದಷ್ಟೂ ಹರಳು ಬೀಜದ ಹೊಲಗಳಿವೆ. ಹಳ್ಳಿಯ ತಿರುವು ಮುರುವು ರಸ್ತೆಯಲ್ಲಿ ಸಾಗಿದರೆ ಸರ್ಕಾರಿ ಉತ್ಕೃಷ್ಟ ಹಿರಿಯ ಪ್ರಾಥಮಿಕ ಶಾಲೆಗೆ ಬಂದು ತಲಪುತ್ತೇವೆ. ರಾಜಸ್ಥಾನದ ಉತ್ಕೃಷ್ಟ ಶಾಲೆಯು ಮಾದರಿ / ಆದರ್ಶ ವಿದ್ಯಾಲಯಕ್ಕೆ ಸಮನಾದುದು. ಶಿಕ್ಷಣ ಇಲಾಖೆಯು ಶಾಲೆಗಳ ಮೌಲ್ಯಮಾಪನವನ್ನು ಮಾಡಿ ಪ್ರತಿ ಗ್ರಾಮ ಪಂಚಾಯ್ತಿಯಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ಮತ್ತು ಒಂದು ಹಿರಿಯ ಪ್ರಾಥಮಿಕ ಶಾಲೆಯನ್ನು ಉತ್ಕೃಷ್ಟ ಶಾಲೆಯೆಂದು ಹೆಸರಿಸುತ್ತದೆ. ಅದು ಒಂದು ಗೌರವ ಸೂಚಕ ಹೆಸರಾಗಿ ಉಳಿದಿದೆಯೇ ಹೊರತು ಅಂತಹ ಶಾಲೆಗಳಿಗೆ ಇಲಾಖೆ ಯಾವುದೇ ವಿಶೇಷ ಸೌಲಭ್ಯಗಳನ್ನು ಒದಗಿಸಿಲ್ಲ. ವಿವಿಧ

ರಾಜ್ಯಗಳಲ್ಲಿ ಕಾರ್ಯಕ್ರಮಗಳಿಗೂ ಅವುಗಳ ಅನುಷ್ಠಾನಕ್ಕೂ ಬಹಳಷ್ಟು ವ್ಯತ್ಯಾಸ ಇರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಕೆಲವೊಮ್ಮೆ ಒಂದೇ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಸಹ ಇಂತಹ ವಿದ್ಯಮಾನವನ್ನು ನೋಡಬಹುದು.

ಬೆಳಗಿನ ಪ್ರಾರ್ಥನಾ ಸಭೆಗೆ ಎಂಟು ತರಗತಿಗಳ ಮಕ್ಕಳು ಸಾಲುಗಟ್ಟಿ ನಿಲ್ಲುತ್ತಿದ್ದಂತೆ ನಾವು ಅಲ್ಲಿಗೆ ಹೋದೆವು. ಅದು ಬೆಳಗಿನ ಗಜಿಬಿಜಿಯ ಗರಿಷ್ಠ ಚಟುವಟಿಕೆಯ ಸಮಯವಾಗಿದ್ದರೂ ಅಲ್ಲಿ ಅವ್ಯವಸ್ಥೆಯಿರಲಿಲ್ಲ. ಮಕ್ಕಳೆಲ್ಲ ಚುರುಕಿನಿಂದ ಶಿಸ್ತುಬದ್ಧವಾಗಿ ಸೇರಿಕೊಂಡರು. ಒಂದು ಧ್ವನಿವರ್ಧಕ ಮತ್ತು ಬ್ಯಾಂಡ್ ಸೆಟ್ಟನ್ನು ಅಲ್ಲೆ ಮುಂಭಾಗದಲ್ಲೇ ಇಡಲಾಗಿತ್ತು. ಆ ಕಾರ್ಯಕಲಾಪ ನಿರ್ವಹಿಸಲಿರುವ ವಿದ್ಯಾರ್ಥಿಗಳ ಸಣ್ಣ ಗುಂಪು ಅಲ್ಲಿತ್ತು. ಶಾಲೆಯ ಮುಖ್ಯ ಶಿಕ್ಷಕರು ಮುಂಭಾಗದಲ್ಲಿ ನಿಂತಿದ್ದರು. ಕನ್ನಡಕವನ್ನು ಧರಿಸಿದ್ದ ಆ ವ್ಯಕ್ತಿ ಸುಮಾರು ಐವತ್ತು ದಾಟಿದವರಿದ್ದಿರಬಹುದು. ಅವರು ಅನಾರೋಗ್ಯದಿಂದಿರುವುದು ಸ್ಪಷ್ಟವಾಗಿ ಕಾಣುತ್ತಿತ್ತು. ಆದರೆ ಇಡೀ ದಿನ ಕಾರ್ಯನಿರ್ವಹಿಸಲು ಸಂಕಲ್ಪ ತೊಟ್ಟು ಬಂದಂತೆ ಕಾಣಿಸುತ್ತಿದ್ದರು. ಎಲ್ಲ ಎಂಟು ಮಂದಿ ಶಿಕ್ಷಕರು ಮತ್ತು ಒಟ್ಟು ಇನ್ನೂರ ಐವತ್ತನಾಲ್ಕು ವಿದ್ಯಾರ್ಥಿಗಳ ಪೈಕಿ ಇನ್ನೂರು ವಿದ್ಯಾರ್ಥಿಗಳು ಹಾಜರಿದ್ದರು. ಸಾಂಪ್ರದಾಯಿಕ ಹಾಡುಗಳ ಜೊತೆಗೆ ಆ ಸಭೆಯನ್ನು ನಿರ್ವಹಿಸುತ್ತಿದ್ದ ವಿದ್ಯಾರ್ಥಿಗಳ ಗುಂಪು ಇತರ ವಿದ್ಯಾರ್ಥಿಗಳನ್ನು ಪ್ರಸಕ್ತ ವಿದ್ಯಮಾನಗಳು, ಪದ್ಯ, ಕಥೆಗಳ ವಾಚನ ಮುಂತಾದವುಗಳಲ್ಲಿ ತೊಡಗಿಸಿತು. ಸಭೆ ಮುಗಿದು ಎಲ್ಲ ವಿದ್ಯಾರ್ಥಿಗಳು ತರಗತಿಗಳಿಗೆ ಹೋದ ಅನಂತರ ಮುಖ್ಯ ಶಿಕ್ಷಕರು ತಮ್ಮ ಕಛೇರಿಗೆ ಹೋದರು. ಮುಖ್ಯ ಶಿಕ್ಷಕರೊಂದಿಗಿನ ಭೇಟಿಯೇ ನಮ್ಮ ಈ ಯಾತ್ರೆಯ ಮುಖ್ಯಾಂಶವಾಗಿರುತ್ತದೆ ಎಂದು ನನ್ನ ಸಹೋದ್ಯೋಗಿ ನನ್ನೊಡನೆ ಹೇಳಿದ್ದರು. ರಮೇಶ್ ಚಂದ್ರ ಪಾಲ್ ಅವರು ಕುಳಿತುಕೊಂಡು ನಮ್ಮನ್ನೂ ಕುಳ್ಳಿರಿಸಿ ಪರಸ್ಪರ ಪರಿಚಯ ಮಾಡಿಕೊಳ್ಳುವ ಔಪಚಾರಿಕ ಕೆಲಸಗಳು ಮುಗಿದ ಮೇಲೆ ನಾವು ಅವರೊಡನೆ ಹಾಗೂ ಅವರ ಸಹೋದ್ಯೋಗಿ ರಾಮರಾಜ ಗುಜ್ಜರ್ ಅವರೊಡನೆ ಗಂಟೆಗಟ್ಟಲೆ ಮಾತನಾಡಿದೆವು. ಈ ಪ್ರಕ್ರಿಯೆಯಲ್ಲಿ ನಾವು ಮೀಠನ್ ಹಿರಿಯ ಪ್ರಾಥಮಿಕ ಶಾಲೆಯ ಚರಿತ್ರೆ ಹಾಗೂ ವಿಕಾಸದ ರೋಚಕ ಮಾಹಿತಿಗಳನ್ನು ಸಂಗ್ರಹಿಸಿದೆವು. ಶಾಲೆಯ ಮಕ್ಕಳೊಂದಿಗೂ ಸಂವಾದ ನಡೆಸುತ್ತ, ಅವರ ಚಟುವಟಿಕೆಗಳನ್ನು ನೋಡುತ್ತ ಕೆಲಕಾಲ ಕಳೆದೆವು.

ಮೀಠನ್ ಶಾಲೆಯನ್ನು ಸಂದರ್ಶಿಸುವವರಿಗೆ ಮೊದಲಿಗೆ ಕಣ್ಣಿಗೆ ಬೀಳುವುದೇ ಆ ಒಂದು ದೊಡ್ಡ ಆಲದ ಮರ. ಶಾಲೆಯ ಆವರಣದ ಮಧ್ಯಭಾಗದಲ್ಲಿ ಆ ಮರ ತನ್ನ ಬಿಳಲುಗಳೊಂದಿಗೆ ವಿಶಾಲವಾಗಿ ಬೇರೂರಿದೆ. ಆ ಮರ ಶಿಕ್ಷಕರನ್ನೂ ವಿದ್ಯಾರ್ಥಿಗಳನ್ನೂ ಅಯಸ್ಕಾಂತದಂತೆ ತನ್ನತ್ತ ಸೆಳೆದುಕೊಳ್ಳುತ್ತದೆ. ಅವರೆಲ್ಲರೂ ಅದರಡಿಯಲ್ಲಿ ಸೇರುತ್ತಾರೆ. ರಮೇಶ್ ಚಂದ್ರ ಪಾಲ್ ಅವರು ಆ ಶಾಲೆಯ ಇತಿಹಾಸವನ್ನು ಹೇಳಲು ಪ್ರಾರಂಭಿಸಿದ ಸ್ವಲ್ಪ ಹೊತ್ತಿನಲ್ಲೆ ಆಲದ ಮರದ ಮಹತ್ವ ನಮಗೆ ತಿಳಿಯಿತು. 1956ರಲ್ಲಿ ಸ್ಥಾಪಿತಗೊಂಡ ಆ ಶಾಲೆಗೆ ಕಟ್ಟಡವಾಗಲಿ ತರಗತಿ ಕೋಣೆಗಳಾಗಲಿ ಇರಲಿಲ್ಲ. ಈ ಆಲದ ಮರದ ಕೆಳಗೆ ಪಾಠಗಳನ್ನು ಹೇಳಿಕೊಡುತ್ತಿದ್ದರು. ಮುಂದೆ ತರಗತಿ ಕೊಠಡಿಗಳನ್ನು ಒಂದೊಂದಾಗಿ ಸೇರಿಸಲಾಯಿತು. 2005ರಲ್ಲಿ ಈ ಶಾಲೆಯನ್ನು ಎಂಟನೇ ತರಗತಿಯವರೆಗೆ

ವಿಸ್ತರಿಸಿದರು. ಆಗ ಅದು ನಿಜವಾದ ಅರ್ಥದಲ್ಲಿ ಹಿರಿಯ ಪ್ರಾಥಮಿಕ ಅಥವಾ ಮಾಧ್ಯಮಿಕ ಶಾಲೆಯಾಯಿತು. "ನಾನು ಬಡ್ತಿ ಪಡೆದು 2009ರಲ್ಲಿ ಈ ಶಾಲೆಗೆ ಬಂದೆ. ಆ ಸಮಯದಲ್ಲಿ ದಾಖಲಾತಿ ನೂರ ಇಪ್ಪತ್ತರಷ್ಟಿತ್ತು. ಆದರೆ ಎಂಬತ್ತರಿಂದ ಎಂಬತ್ತೈದು ವಿದ್ಯಾರ್ಥಿಗಳು ಮಾತ್ರ ಹಾಜರಾಗುತ್ತಿದ್ದರು. ಅದರ ಹಿಂದಿನ ವರ್ಷ ಬೋರ್ಡ್ ನಡೆಸಿದ ಎಂಟನೇ ತರಗತಿ ಪರೀಕ್ಷೆಯಲ್ಲಿ ಒಬ್ಬನೇ ಒಬ್ಬ ವಿದ್ಯಾರ್ಥಿಯೂ ತೇರ್ಗಡೆಯಾಗಿರಲಿಲ್ಲ. ನಾನು ಇಲ್ಲಿಗೆ ಬಂದಾಗ ನನ್ನ ಮೇಜಿನ ಮೇಲೆ ಮೊದಲು ಕಂಡಿದ್ದು ಬೋರ್ಡ್ ನಡೆಸಿದ ಎಂಟನೇ ತರಗತಿ ಪರೀಕ್ಷೆಯಲ್ಲಿ ಯಾಕೆ ಶೂನ್ಯ ಫಲಿತಾಂಶ ಬಂದಿದೆ ಎಂಬ ಪ್ರಶ್ನೆಯಿದ್ದ ನ್ಯಾಯಾಲಯದ ಮೊಕದ್ದಮೆಯ ನೋಟೀಸ್."

ಅಲ್ಲಿನ ಶಿಕ್ಷಕರು ಶಾಲೆಯನ್ನು ಉಳಿಸಿಕೊಳ್ಳಲು ನ್ಯಾಯಾಲಯಕ್ಕೆ ಎಡತಾಕುತ್ತಿದ್ದರು. ಬೋರ್ಡ್ ನಡೆಸಿದ ಪರೀಕ್ಷೆಯಲ್ಲಿ 'ಶೇಕಡ ನೂರರಷ್ಟು' ವಿಫಲತೆ ಯಾಕೆ ಬಂತು ಎಂದು ನ್ಯಾಯಾಲಯದ ಮುಂದೆ ಸಮರ್ಥಿಸಿಕೊಳ್ಳುವುದೊಂದೇ ಅವರ ಗುರಿಯಾಗಿತ್ತು. ಈ ಸನ್ನಿವೇಶದಲ್ಲಿ "ನಾನು ಬಂದಿದ್ದಾದರೂ ಎಲ್ಲಿಗೆ?" ಎಂಬ ಯಕ್ಷಪ್ರಶ್ನೆ ರಮೇಶ್ ಅವರನ್ನು ಕಾಡಿತು. ಆದರೆ ರಮೇಶ್ ತಮಗೆ ತಾವೇ ಒಂದು ಪ್ರಶ್ನೆಯನ್ನು ಕೇಳಿಕೊಂಡರು: ಈಗ ನಾನು ಏನು ಮಾಡಬೇಕು? ಅವರು ಅಬು ರೋಡ್‌ನಲ್ಲಿ ವಾಸವಾಗಿದ್ದುದರಿಂದ ದಿನಾಲೂ ಮೀಠನ್‌ಗೆ 30ಕ್ಕಿಂತಲೂ ಹೆಚ್ಚು ಕಿ.ಮೀ. ಪ್ರಯಾಣ ಮಾಡಬೇಕಾಗುತ್ತಿತ್ತು. ಅದು ಅವರಿಗೆ ಸರಿ ಕಾಣಿಸಲಿಲ್ಲ. ಮೀಠನ್‌ನಲ್ಲೇ ನೆಲೆಸಲು ತೀರ್ಮಾನಿಸಿದರು. ಅನಾರೋಗ್ಯದ ಹಿನ್ನೆಲೆಯಿತ್ತು; (ಇದರ ಬಗ್ಗೆ ಮುಂದೆ ತಿಳಿದುಕೊಳ್ಳೋಣ). ಅವರ ಕುಟುಂಬಕ್ಕೆ ಅದು ಅಪಾಯಕಾರಿ ತೀರ್ಮಾನ ಎಂದು ಅನಿಸಿತು. ಆದರೆ ಶಾಲೆಯ ಪರಿಸ್ಥಿತಿ ಸುಧಾರಿಸಬೇಕೆಂದು ರಮೇಶ್ ದೃಢವಾಗಿ ನಿಶ್ಚಯಿಸಿದ್ದರು. ತಾವು ದೂರದಲ್ಲಿದ್ದುಕೊಂಡು ಅದನ್ನು ಮಾಡುವುದು ಸಾಧ್ಯವಿಲ್ಲವೆಂಬುದು ರಮೇಶ್ ಅವರ ಅನಿಸಿಕೆಯಾಗಿತ್ತು. ತಾವು ಶಾಲೆಗೆ ಬೇಗನೆ ಬಂದು ಶಾಲಾ ಸಿಬ್ಬಂದಿಯಲ್ಲಿ ಸಮಯ ಪ್ರಜ್ಞೆಯನ್ನು ತಂದರು. ಕ್ರಮೇಣ ಇತರ ಶಿಕ್ಷಕರೂ ಶಾಲೆಗೆ ಸರಿಯಾದ ಸಮಯಕ್ಕೆ ಬರಲಾರಂಭಿಸಿದರು. ರಮೇಶ್ ತರಗತಿಗಳಲ್ಲಿ ಸುತ್ತಾಡುತ್ತ ಮಕ್ಕಳನ್ನು ಮಾತನಾಡಿಸುತ್ತ ಸಂಬಂಧದ ಸೇತುವೆ ಕಟ್ಟತೊಡಗಿದರು. ಪ್ರತಿಯೊಂದು ಮಗುವಿನ ಬಗ್ಗೆಯೂ ತಿಳಿದುಕೊಂಡರು. 2009ರ ನವೆಂಬರ್ ಹೊತ್ತಿಗೆ ಪಠ್ಯಕ್ರಮ ಬೋಧನೆ ಶೇ.50–60ರಷ್ಟು ಪೂರ್ಣಗೊಂಡಿತ್ತು. ಆದರೆ ಮಕ್ಕಳಲ್ಲಿನ ಗ್ರಹಿಕೆ ಮತ್ತು ತಿಳಿವಳಿಕೆ ರಮೇಶ್ ಅವರ ಮಾತಿನಲ್ಲಿ ಹೇಳುವುದಾದರೆ "ಶೂನ್ಯ"ವಾಗಿತ್ತು. ಶಿಕ್ಷಕರನ್ನು ಕರೆದು ಹೇಳಿದರು: "ಕಲಿಕೆಯು ಶೂನ್ಯವಾಗಿರುವಾಗ ಪಠ್ಯಕ್ರಮ ಪೂರ್ಣಗೊಳಿಸಿ ಪ್ರಯೋಜನವೇನು? ನಿಮ್ಮ ಪಠ್ಯಕ್ರಮ ಹಾಗೇ ಇರಲಿ! ಮಕ್ಕಳಿಗೆ ಮೂಲಭೂತ ಅಂಶಗಳನ್ನು ಕಲಿಸೋಣ." ಆ ಮಕ್ಕಳಿಗೆ ಮೂಲ ಅಕ್ಷರ ಜ್ಞಾನವನ್ನೂ ಮೂಲ ಸಂಖ್ಯಾಜ್ಞಾನವನ್ನೂ ಬೋಧಿಸಬೇಕು ಎಂಬ ಬಗ್ಗೆ ರಮೇಶ್ ಅವರಿಗೆ ಸ್ಪಷ್ಟತೆಯಿತ್ತು. ಇದು ಓದುವ, ಬರೆಯುವ ಮತ್ತು ಗ್ರಹಿಕೆಯ ಬಾಗಿಲನ್ನು ತೆರೆಯುತ್ತದೆ. ಇಂಥ ಸ್ಪಷ್ಟ ತಿಳಿವಳಿಕೆಯೊಂದಿಗೆ ಶಿಕ್ಷಕರು ತಮ್ಮ ವೇಳಾಪಟ್ಟಿಗಳನ್ನು ಸಿದ್ಧಪಡಿಸಿಕೊಂಡು

ಮಕ್ಕಳಿಗೆ ಮೂಲ ಪರಿಕಲ್ಪನೆಗಳನ್ನು ವಿಷಯಗಳನ್ನು ಕಲಿಸುವುದರತ್ತ ಗಮನ ಹರಿಸಿದರು. ಅರ್ಥಹೀನ ಪಠ್ಯಕ್ರಮ ಮುಗಿಸುವ ಆದ್ಯತೆ ಹಿನ್ನೆಲೆಗೆ ಬಿತ್ತು. ಅಲ್ಲಿ ಸಂಸ್ಕೃತ ಬೋಧಿಸಲು ಯಾರೂ ಇರಲಿಲ್ಲ. ತಾನೆಂದೂ ಸಂಸ್ಕೃತ ಬೋಧನೆ ಮಾಡಿಲ್ಲವಾದರೂ ರಮೇಶ್ ಈ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡರು.

ಅವರ ಮುಂದಿನ ಹೆಜ್ಜೆ ಹಳ್ಳಿಯ ಜನರ ಸಭೆಯನ್ನು ನಡೆಸುವುದು. "ದಯವಿಟ್ಟು ನಿಮ್ಮ ಮಕ್ಕಳನ್ನು ಶಾಲೆಗೆ ದಿನಾಲೂ ಸರಿಯಾದ ಸಮಯಕ್ಕೆ ಕಳಿಸಿ. ಈ ಶಾಲೆ ಸರಿಯಾಗಿ ನಡೆಯುವಂತೆ ನಾನು ನೋಡಿಕೊಳ್ಳುತ್ತೇನೆ" ಎಂದು ಜನರಲ್ಲಿ ಕೈಮುಗಿದು ಕೇಳಿಕೊಂಡುದಾಗಿ ರಮೇಶ್ ಹೇಳುತ್ತಾರೆ. ಅವರು ಇದನ್ನು ಅಲ್ಲಿಗೇ ಬಿಡದೆ ತಮ್ಮ ಶಿಕ್ಷಕರನ್ನು ಒಡಗೂಡಿಕೊಂಡು ಎಲ್ಲ ಪೋಷಕರ ಮನೆಗಳಿಗೆ ಭೇಟಿಕೊಟ್ಟರು. ದಿನವೂ ಸಾಯಂಕಾಲ ಕೆಲವು ನಿಮಿಷ ಬಿಡುವು ಮಾಡಿಕೊಂಡು ಆ ದಿನ ಮಕ್ಕಳು ಶಾಲೆಯಲ್ಲಿ ಏನು ಕಲಿತಿದ್ದಾರೆ, ಮನೆಗೆಲಸ ಏನಾದರೂ ಕೊಟ್ಟಿದ್ದಾರೆಯೇ ಎಂದು ಪರಿಶೀಲನೆ ಮಾಡಬೇಕೆಂದು ಪೋಷಕರಲ್ಲಿ ಮನವಿ ಮಾಡಿಕೊಂಡರು. ಏನೇ ಅನುಮಾನಗಳಿದ್ದರೂ ತಮ್ಮೊಡನೆ ಮಾತನಾಡುವಂತೆಯೂ ತಮ್ಮ ಮನೆ ಎಲ್ಲರಿಗೂ ಮುಕ್ತವೆಂದೂ ಮಕ್ಕಳು ಇಪ್ಪತ್ನಾಲ್ಕು ಗಂಟೆಗಳಲ್ಲಿ ಯಾವಾಗೆಂದರೆ ಆಗ ಬಂದು ಸಮಸ್ಯೆ ಪರಿಹಾರ ಮಾಡಿಕೊಳ್ಳಬಹುದೆಂದೂ ಸೂಚಿಸಿದರು. ಇದರ ಪರಿಣಾಮವಾಗಿ ಭಾನುವಾರಗಳಲ್ಲೂ ಕೆಲವು ಮಕ್ಕಳು ಬಂದು ತಮ್ಮ ಸಂದೇಹಗಳಿಗೆ ಪರಿಹಾರ ಕಂಡುಕೊಳ್ಳತೊಡಗಿದರು. ಶಾಲೆಗೂ ಸಮುದಾಯಕ್ಕೂ ನಡುವೆ ವಿಶ್ವಾಸದ ಸಂಬಂಧ ಬೆಳೆಯತೊಡಗಿತು. ಮಕ್ಕಳ ಹಾಜರಿ ಹೆಚ್ಚಿತು. ಶಿಕ್ಷಕರ ಉತ್ಸಾಹವೂ ವೃದ್ಧಿಯಾಯಿತು. ಕಲಿಕೆಯ ಗುಣಮಟ್ಟದಲ್ಲಿ ಏರಿಕೆಯಾಯಿತು. ರಮೇಶ್ ಶಾಲೆಯ ಕಾರ್ಯಕಲಾಪಗಳನ್ನು ನಿಕಟವಾಗಿ ಗಮನಿಸುತ್ತಿದ್ದರು. ಎಂಟನೇ ತರಗತಿಯಲ್ಲಿ ವ್ಯಯಮಾಡಿದಷ್ಟು ಸಮಯವನ್ನು ಅವರು ಒಂದನೇ ತರಗತಿಯಲ್ಲೂ ಕಳೆಯುತ್ತಿದ್ದರು. ಮಕ್ಕಳ ಕಲಿಕೆಯ ಪ್ರಗತಿಯನ್ನು ಅವರು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಇದೇ ವೇಳೆ ತಮ್ಮದೇ ಆದ ಬೋಧನಾ ವಿಧಾನವನ್ನು ಅನುಸರಿಸಲು ಅವರು ಶಿಕ್ಷಕರಿಗೆ ಸ್ವಾತಂತ್ರ್ಯವನ್ನೂ ನೀಡಿದ್ದರು.

ರಮೇಶ್ ಅವರು ಉತ್ತರ ಪ್ರದೇಶದ ಕಾನ್ಪುರದವರು. ಮೀಠನ್ ಶಾಲೆಯಲ್ಲಿ ಅವರ ಮೊದಲನೇ ವರ್ಷ ಮುಗಿದು ಬೇಸಿಗೆ ರಜೆಯಲ್ಲಿ ಸ್ವಂತ ಊರಿಗೆ ಹೋಗಿದ್ದರು. ಆ ವರ್ಷ ಎಂಟನೇ ತರಗತಿ ಬೋರ್ಡ್ ಪರೀಕ್ಷೆಯಲ್ಲಿ ಅವರ ಶಾಲೆಯ ಎಲ್ಲಾ ಇಪ್ಪತ್ಮೂರು ಮಕ್ಕಳೂ ತೇರ್ಗಡೆಯಾಗಿರುವ ಸುದ್ದಿ ಅವರಿಗೆ ತಲಪಿತು. ಅವರು ಮೀಠನ್‌ಗೆ ವಾಪಸಾದಾಗ ಬಿಇಓ, ಡಿಇಓ, ಸಮುದಾಯದ ಗಣ್ಯರು ಮುಂತಾದವರೆಲ್ಲ ಬಂದು "ಇದು ಹೇಗೆ ಸಾಧ್ಯವಾಯಿತು?" ಎಂದು ಪ್ರಶ್ನೆ ಮಾಡಿ ಅಭಿನಂದನೆ ಹೇಳುವವರೇ. "ನಾವು ಒಟ್ಟಾಗಿ ಕೆಲಸ ಮಾಡಿದೆವು, ಪೋಷಕರೂ ನಮ್ಮಲ್ಲಿ ವಿಶ್ವಾಸವಿಟ್ಟರು; ನಮ್ಮನ್ನು ಬೆಂಬಲಿಸಿದರು. ನಮ್ಮ ಶಿಕ್ಷಕರು ನಿಸ್ಪೃಹರಾಗಿ ಕೆಲಸ ಮಾಡಿದರು. ಈ ಫಲಿತಾಂಶ ಬರಲೇಬೇಕಿತ್ತು" ಎಂಬುದು ರಮೇಶರ ಉತ್ತರವಾಗಿತ್ತು. ಈ ಫಲಿತಾಂಶದ ಪರಿಣಾಮ ಕೆಲವೇ ದಿನಗಳಲ್ಲಿ ಗೋಚರಿಸಿತು. ಸಮುದಾಯದವರು ಮಕ್ಕಳನ್ನು ಖಾಸಗಿ ಶಾಲೆಗೆ ಕಳಿಸುವುದನ್ನು ನಿಲ್ಲಿಸಿದರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸೇರಿಸಿದರು.

ರಮೇಶರ ಮಾತಿನಲ್ಲಿ ಹೇಳುವುದಾದರೆ, 'ವಹಾಂ ಸೆ ನಿಕಾಲ್ ಲಿಯಾ, ಔರ್ ಹಮಾರೇ ಸ್ಕೂಲ್ ಮೆ ಭರ್ತಿ ಕರ್ ಲಿಯಾ' (ಮಕ್ಕಳನ್ನು ಅಲ್ಲಿಂದ ಬಿಡಿಸಿದರು, ನಮ್ಮ ಶಾಲೆಗೆ ಸೇರಿಸಿದರು). ಆ ಹೆಮ್ಮೆಯನ್ನು ತೋರಿಸುವ ಹಕ್ಕು ಅವರಿಗಿತ್ತು. ಆ ವರ್ಷ, ಅಂದರೆ 2010ರಲ್ಲಿ ಮಕ್ಕಳ ದಾಖಲಾತಿಯು ನೂರಾ ಇಪ್ಪತ್ತರಿಂದ ಇನ್ನೂರಕ್ಕೆ ಏರಿತು. ಪೋಷಕರು ಖಾಸಗಿ ಶಾಲೆಗಾಗಿ ಶುಲ್ಕ, ಬಸ್ ಪ್ರಯಾಣ ಮತ್ತಿತರ ಬಾಬತ್ತಿಗೆ ಖರ್ಚುಮಾಡುತ್ತಿದ್ದ ದೊಡ್ಡಮೊತ್ತದ ಹಣ ಉಳಿಯಿತು. ಅದರಲ್ಲಿ ಒಂದಂಶವನ್ನು ಅವರು ಸರ್ಕಾರಿ ಶಾಲೆಗೆ ಕೊಟ್ಟರು. ಹೀಗೆ ಮಾತನಾಡುತ್ತಿದ್ದಂತೆ ರಮೇಶ್ ಕೆಮ್ಮತೊಡಗಿದರು. ಅವರು ಜ್ವರತಾಪದಿಂದ ಬಳಲುತ್ತಿದ್ದರು. ಆದರೂ ಎದ್ದು ನಮ್ಮನ್ನು ಹೊರಗಡೆ ಹಜಾರದಲ್ಲಿ ಹಾಕಿದ 'ಭಾಮ್‌ಷಾ'ವನ್ನು (ದಾನಿಗಳ ಪಟ್ಟಿ– ಆ ಪ್ರದೇಶದಲ್ಲಿ ಅದನ್ನು ಹಾಗೆ ಕರೆಯುತ್ತಾರೆ) ತೋರಿಸಿದರು. "ಇದೆಲ್ಲವೂ 2010ರ ನಂತರದಲ್ಲಿ ಬಂದದ್ದು; ಇಲ್ಲಿನ ಎಲ್ಲ ಸೌಕರ್ಯಗಳನ್ನೂ ಈ ದೇಣಿಗೆಗಳಿಂದ ಮಾಡಿಕೊಂಡಿದ್ದೇವೆ" ಎಂದರು. ಸ್ವಲ್ಪ ಸಮಯದ ನಂತರ ರಮೇಶ್ ಸ್ವಗತವೆಂಬಂತೆ ಹೇಳಿದರು: "ಯೇ ಜುನೂನ್ ಹೆ (ಇದು ಒಂದು ಹುಚ್ಚು). ನಾನು ಹುಟ್ಟೂರು ಬಿಟ್ಟು ಇಲ್ಲಿಗೆ ಬಂದಿದ್ದೇನೆ. ಅತಿ ಹೀನಾವಸ್ಥೆಯಲ್ಲಿರುವ ಬಡ ಮಕ್ಕಳಿಗೆ ನಾನು ಏನನ್ನಾದರೂ ಮಾಡಬೇಕು ಎಂಬ ಹಂಬಲದಿಂದ ಬಂದೆ." ಅವರ ಮಾತು ಪೊಳ್ಳು ಅನಿಸಲಿಲ್ಲ. ಸಹೋದ್ಯೋಗಿಗಳ ಜತೆಗಿನ ಅವರ ಸುಲಲಿತ ಸಂಬಂಧವನ್ನು ನಾವು ನೋಡಿದೆವು. ಅವರಿಗೆ ರಮೇಶ್ ಗೌರವ ಕೊಡುತ್ತಿದ್ದರು. ಸ್ವಾತಂತ್ರ್ಯವನ್ನೂ ಕೊಟ್ಟಿದ್ದರು. ತಾನು ಯಾವಾಗಲೂ ಅವರ ಸಹೋದ್ಯೋಗಿಯೇ, ಅವರು ಶಾಲೆಯ ಅಭಿವೃದ್ಧಿಗೆ ಏನೇ ಸಲಹೆ ಕೊಟ್ಟರೂ ಅದನ್ನು ಜಾರಿಗೆ ತರಲು ಯತ್ನಿಸುವುದಾಗಿ ಅವರಿಗೆ ಹೇಳಿದ್ದೇನೆ ಎಂದರು ರಮೇಶ್. ನಾವು ಮಾತನಾಡುತ್ತಿರಬೇಕಾದರೆ ಕೆಲವು ಮಕ್ಕಳು ಒಳಗೆ ಬಂದರು. ಅವರಿಗೆ ಕಾಗದ ಬೇಕಾಗಿತ್ತು. ರಮೇಶ್ ಅದನ್ನು ಅವರಿಗೆ ಕೊಟ್ಟರು. ಜತೆಗೆ ಕಾಯಿಲೆಯಿಂದ ಸುಧಾರಿಸಿದ ಮಗುವನ್ನು ಹತ್ತಿರ ಕರೆದು ಮೈದಡವಿ ಮಾತನಾಡಿಸಿದರು. ಮಕ್ಕಳೊಡನೆ ಅವರ ನಡೆನುಡಿ ಸಹಜವಾದುದಾಗಿತ್ತು. ಇದನ್ನು ನಾವು ಅವರ ಗಮನಕ್ಕೆ ತಂದಾಗ "ಅದು ಸಹಜವೂ ನೈಜವೂ ಆಗಿರಬೇಕು. ಅವರು ನನ್ನ ಮಡಿಲಲ್ಲೇ ಕುಳಿತುಕೊಳ್ಳುತ್ತಾರೆ. ನಾನು ಅವರ ಕೈಹಿಡಿದು ಮಾತನಾಡಿಸುತ್ತೇನೆ. ಆದರೆ ಅವರು ಕಲಿಯಲೇಬೇಕು. ಶಾಲೆಗೆ ತಪ್ಪದೆ ಬರಬೇಕು. ಅವರ ಜನ್ಮದಿನವನ್ನೂ ನಾವು ಆಚರಿಸುತ್ತೇವೆ. ಅವರ ಪೋಷಕರನ್ನೂ ಕರೆಯುತ್ತೇವೆ." ಮಕ್ಕಳಿಗೆ ಪೌಷ್ಟಿಕ ಆಹಾರ ಸಿಗಬೇಕು ಎಂಬುದು ಅವರ ಕಾಳಜಿ. ಅದಕ್ಕೆ ಸಹಾಯ ಮಾಡುವಂತೆ ಅವರು ಸಮುದಾಯದವರನ್ನು ಕೇಳಿದ್ದಾರೆ. "ನಾವು ಶಿಕ್ಷಕರೂ ಕೈಲಾದ್ದನ್ನು ಕೊಡುತ್ತೇವೆ. ಇದರಿಂದಾಗಿ ಊಟದಲ್ಲಿ ಹಣ್ಣುಗಳೂ ಇರುತ್ತವೆ. ನಾವು ಶಾಲೆಯ ಗೋಡೆಗಳಿಗೆ ಬಣ್ಣ ಬಳಿದಿದ್ದೇವೆ. ಒಂದು ತೂಗುಯ್ಯಾಲೆ, ಒಂದು ಜಾರುಬಂಡಿ ಒದಗಿಸಿದ್ದೇವೆ. ಮಕ್ಕಳು ಶಾಲೆಗೆ ಸಂತೋಷದಿಂದ ಬರಬೇಕು, ಸಂತೋಷದಿಂದ ಹೋಗಬೇಕು, ಆಗ ಕಲಿಕೆ ಭಾರವಾಗುವುದಿಲ್ಲ."

ರಮೇಶ್ ಅವರ ತಂದೆಗೆ ಮಗ ಶಿಕ್ಷಕನಾಗುವುದು ಖಂಡಿತಾ ಇಷ್ಟವಿರಲಿಲ್ಲ. "ನಾನು ಪೊಲೀಸ್ ಅಥವಾ ಕಂದಾಯ ಅಧಿಕಾರಿಯಾಗಬೇಕು ಎಂದು ಅವರು ಅಪೇಕ್ಷಿಸಿದ್ದರು.

ಆದರೆ ನನಗೆ ಶಿಕ್ಷಕನಾಗಬೇಕೆಂಬ ಮನಸ್ಸಿತ್ತು. ನಾನು ಖಾಸಗಿ ಶಾಲೆಯೊಂದರಲ್ಲಿ ಹಂಗಾಮಿ ಶಿಕ್ಷಕನಾಗಿ ಐದು ವರ್ಷ ಕೆಲಸ ಮಾಡಿದೆ. ಆಮೇಲೆ ಶಿಕ್ಷಣ ಇಲಾಖೆಯಲ್ಲಿ ಈ ಕೆಲಸ ದೊರಕಿತು." ರಮೇಶ್ ಅವರಿಗೆ ಬಂದಿರುವ ಹೆಸರು, ದೊರಕಿರುವ ಮನ್ನಣೆ ಅನೇಕ ವರ್ಷಗಳ ಸೇವೆಯ ಫಲ. ಇಪ್ಪತ್ತು ವರ್ಷಗಳ ಹಿಂದೆ ಅವರು ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ತಮ್ಮನ್ನು ತಾವು ಗಾಢವಾಗಿ ತೊಡಗಿಸಿಕೊಂಡಿದ್ದರು. ಆ ಸಂದರ್ಭದಲ್ಲಿ ಅವರು ಕಲಿಸಿದ ಅನಕ್ಷರಸ್ಥ ಮಹಿಳೆಯರು ಅವರನ್ನು ಈಗಲೂ ನೆನೆಯುತ್ತಾರೆ. ಅವರು ಯಾವುದೇ ಸಾಂದರ್ಭಿಕ ರಜೆಯನ್ನು ತೆಗೆದುಕೊಳ್ಳುವುದಿಲ್ಲ. (ಕೆಲವು ವರ್ಷಗಳ ಹಿಂದೆ ಅವರಿಗೆ ಅನಾರೋಗ್ಯ ಉಂಟಾಯಿತು. ಅವರಿಗೆ ಲಕ್ವ ಹೊಡೆದಿತ್ತು. ಹಾಗಾಗಿ ಈಗಲೂ ಸ್ವಲ್ಪ ನಿಧಾನವಾಗಿ ನಡೆಯುತ್ತಾರೆ). ಮುಖ್ಯ ಶಿಕ್ಷಕರ ತರಬೇತಿ ಕಾರ್ಯಾಗಾರಕ್ಕೆ ಹೋಗಲೇಬೇಕೆಂದು ಅವರು ಪಟ್ಟು ಹಿಡಿದರು. ಸಹಾಯಕ್ಕೆ ಅಲ್ಲಿಗೆ ಪತ್ನಿಯನ್ನೂ ಕರೆದೊಯ್ಯುವುದಾಗಿ ಜಿಲ್ಲಾಧಿಕಾರಿಗೆ ಹೇಳಿದರು. "ನನ್ನ ಪತ್ನಿ ನನ್ನ ಬಲಗೈ ಇದ್ದಂತೆ" ಎಂದು ಅವರು ಹೇಳಿದರು. "ನಾನು ಮಾಡುವ ಕೆಲಸಕ್ಕೆಲ್ಲ ಅವರು ಸ್ಫೂರ್ತಿಯಾಗಿದ್ದಾರೆ."

2010ರಿಂದ ಶಾಲೆಗೆ ಎಂಟನೇ ತರಗತಿ ಬೋರ್ಡ್ ಪರೀಕ್ಷೆಯಲ್ಲಿ ನೂರಕ್ಕೆ ನೂರರಷ್ಟು ತೇರ್ಗಡೆ ಫಲಿತಾಂಶ ಬರುತ್ತಿದೆ. ಪ್ರತಿ ವರ್ಷವೂ ದಾಖಲಾತಿ ಸಂಖ್ಯೆ ಹೆಚ್ಚುತ್ತಾ ಸಾಗಿದೆ. ಸಮುದಾಯದ ಬೆಂಬಲವೂ ದೊರಕಿದೆ. ಶಾಲೆಯಲ್ಲಿ ದೀಪಗಳು, ಕಂಪ್ಯೂಟರ್‌ಗಳು, ಕೆಲವು ಲ್ಯಾಪ್‌ಟಾಪ್‌ಗಳು ಹಾಗೂ ಒಂದು ಲೇಸರ್ ಮುದ್ರಣ ಯಂತ್ರವನ್ನು ಸಹ ಹಾಕಿಸಲು ಸಾಧ್ಯವಾಗಿದೆ. ಶಾಲಾ ಅಭಿವೃದ್ಧಿ ಉಸ್ತುವಾರಿ ಸಮಿತಿ 2015ರಲ್ಲಿ ಒಂದು ಅತ್ಯುತ್ತಮ ಎಸ್‌ಡಿಎಂಸಿಯೆಂಬ ಪ್ರಶಸ್ತಿ ಗಳಿಸಿದೆ. ಈ ಶಾಲೆಯನ್ನು "ಉತ್ಕೃಷ್ಟ ಶಾಲೆ"ಯೆಂದು ಮನ್ನಣೆ ನೀಡಬೇಕೆಂದು ಜಿಲ್ಲೆಯು ನಾಮನಿರ್ದೇಶನ ಮಾಡಿದೆ. ರಮೇಶ್ ಅವರು ಜಿಲ್ಲೆಯ ಅತ್ಯುತ್ತಮ ಶಿಕ್ಷಕನೆಂಬ ಪ್ರಶಸ್ತಿ ಗಳಿಸಿದ್ದಾರೆ. ಇದು ಅವರು ಮೀಠನ್‌ನಲ್ಲಿ ಮಾಡಿದ ಕೆಲಸಕ್ಕೆ ಮಾತ್ರವಲ್ಲದೆ ಅವರ ಇಪ್ಪತ್ತು ವರ್ಷಗಳ ಪರಿಶ್ರಮಪೂರ್ವಕ ಸೇವೆಗೂ ಸಂದ ಗೌರವವಾಗಿದೆ.

ನಾವು ಶಾಲೆಯ ಸುತ್ತ ನಡೆದಾಡುತ್ತಿದ್ದಾಗ ರಮೇಶ್ ಅವರಿಗೆ ಅವರ ಹಳೆ ವಿದ್ಯಾರ್ಥಿಯ ಮಗನ ಮದುವೆಯ ಆಮಂತ್ರಣ ಪತ್ರಿಕೆ ಬಂತು. ಅದನ್ನು ರಮೇಶ್ ಅವರು ನಸುನಗುತ್ತ ನಮಗೆ ತೋರಿಸಿ: "ನಾನು ಗೋವರ್ಧನ್ ಮದುವೆಗೂ ಹೋಗಿದ್ದೆ. ಈಗ ಅವನ ಮಗನ ಮದುವೆಗೆ ಹೋಗುವ ಕಾಲವೂ ಬಂದಿದೆ!" ಎಂದರು.

ರಾಮ್‌ರಾಜ್ ಗುರ್ಜರ್ ಅವರು ತೆಗೆದುಕೊಳ್ಳುತ್ತಿದ್ದ ತರಗತಿಗೆ ನಾವು ಬಂದೆವು. ಅವರೊಂದಿಗೆ ಸಮಯ ಕಳೆಯದೆ ನಮ್ಮ ಭೇಟಿ ಪೂರ್ಣವಾಗದು ಎಂದು ನಮ್ಮ ಸಹೋದ್ಯೋಗಿಗಳು ನಮಗೆ ಹೇಳಿದ್ದರು. 2010ರಿಂದ ರಾಮ್‌ರಾಜ್ ಮೀಠನ್‌ನಲ್ಲಿ ಇದ್ದಾರೆ. ಅವರು ಪ್ರಾಥಮಿಕ ತರಗತಿಗಳಿಗೆ ಹಿಂದಿ ಮತ್ತು ಹಿರಿಯ ಪ್ರಾಥಮಿಕ ತರಗತಿಗಳಿಗೆ ಸಂಸ್ಕೃತವನ್ನು ಕಲಿಸುತ್ತಾರೆ. ರಾಮ್‌ರಾಜ್ ಚಿಕ್ಕ ಮಕ್ಕಳಿಗೆ ಕಲಿಸುತ್ತಿದ್ದಾಗ ನಾವೂ ಅದರಲ್ಲಿ ತಲ್ಲೀನರಾದೆವು. ಶಿಕ್ಷಕನಿಗೂ ವಿದ್ಯಾರ್ಥಿಗಳಿಗೂ ಹೊರಪ್ರಪಂಚದ ಅರಿವು ಉಂಟಾದದ್ದು ಪಾಠದ ಸಮಯ ಮುಗಿದ ಮೇಲೆಯೇ. ತರಗತಿಯುದ್ದಕ್ಕೂ

ರಾಮ್‌ರಾಜ್‌ರ ಮುಖದಲ್ಲಿ ಕಿರುನಗೆ ಇತ್ತು. ಪ್ರತಿಯೊಂದು ಮಗುವೂ ಪಾಠದಲ್ಲಿ ಮುಳುಗಿಹೋಗಿತ್ತು. ಎಂಬುದು ನಮಗೆ ಮಾರ್‌ವಾಡಿ ಉಪಭಾಷೆಯ ಅರಿವಿಲ್ಲದಿದ್ದರೂ ತಿಳಿಯುತ್ತಿತ್ತು. ತರಗತಿ ಮುಗಿದ ಬಳಿಕ ರಾಮ್‌ರಾಜ್ ನಮಗೆ ಹೇಳಿದರು: "ರಮೇಶ್ ಮುಖ್ಯ ಶಿಕ್ಷಕರಾಗಿ ಬರುವ ಮೊದಲು ಶಾಲೆ ಒಂದು ರೀತಿ ಅಸ್ತವ್ಯಸ್ತವಾಗಿತ್ತು. ಇಬ್ಬರು ಶಿಕ್ಷಕರು ಸದಾಕಾಲ ಜಗಳವಾಡುತ್ತಿದ್ದರು. ಅವರಲ್ಲೊಬ್ಬರು ಆತ್ಮಹತ್ಯೆ ಮಾಡಿಕೊಂಡರು. ಈ ಶಾಲೆಯ ಸುತ್ತ ವಿಷಾದದ ಛಾಯೆ ಕವಿದಿತ್ತು. ಸಹಜವಾಗಿಯೇ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸುತ್ತಿದ್ದರು. ಆದರೆ ಈಗ ಶಾಲೆ ಸಂಪೂರ್ಣವಾಗಿ ಸಂತೋಷದಾಯಕವಾದ ನೆಮ್ಮದಿಯ ಕೇಂದ್ರವಾಗಿ ಮಾರ್ಪಟ್ಟಿದೆ." ರಾಮ್‌ರಾಜ್ ತಮ್ಮ ಪಾಠದ ವಿಧಾನವನ್ನು ಸಂಕ್ಷಿಪ್ತವಾಗಿ ವಿವರಿಸಿದರು: "ಇಲ್ಲಿನ ಮಕ್ಕಳ ಮಾತೃಭಾಷೆ ಮಾರ್‌ವಾಡಿ. ಅವರಿಗೆ ಕಲಿಸಲು ನಾನು ಮಾರ್‌ವಾಡಿ ಭಾಷೆ ಕಲಿಯಬೇಕಾಯಿತು. ನಾನು ಒಂದನೇ ಮತ್ತು ಎರಡನೇ ತರಗತಿಗಳಿಗೆ ಮಾತನಾಡುತ್ತಾ, ಹಾಡುತ್ತಾ, ನಡು ನಡುವೆ ಪದ್ಯವನ್ನೂ ಕಥೆಗಳನ್ನೂ ಸೇರಿಸಿಕೊಂಡು ಕಲಿಸುತ್ತೇನೆ. ಅವರು ಮುಕ್ತವಾಗಿ ಮಾತನಾಡುವಂತೆ ಉತ್ತೇಜಿಸಲು ನಾನು ಈ ತಂತ್ರ ಬಳಸುತ್ತೇನೆ. ಮಕ್ಕಳು ಯಾವುದೋ ಒಂದು ವಿಷಯಕ್ಕೆ ಹಿಂದಿ ಪದ ತಕ್ಷಣಕ್ಕೆ ಸಿಗದಿದ್ದರೆ ಮಾರ್‌ವಾಡಿ ಪದವನ್ನೇ ಬಳಸಲು ಹೇಳುತ್ತೇನೆ. 2 ನೇ ತರಗತಿಯಲ್ಲಿ ಬರವಣಿಗೆಯ ಕಲಿಕೆ ಪ್ರಾರಂಭವಾಗುತ್ತದೆ. ಎಲ್ಲ ಮಕ್ಕಳು ಭಿಲ್ಲ ಬುಡಕಟ್ಟು ಸಮುದಾಯಕ್ಕೆ ಸೇರಿದವರಾಗಿದ್ದು ಅವರ ಆರ್ಥಿಕ ಪರಿಸ್ಥಿತಿ ದುಸ್ತರವಾಗಿದೆ. ಅವರ ಪೋಷಕರು ಕಲ್ಲಿನ ಗಣಿಗಳಲ್ಲಿ ಕೂಲಿ ಕೆಲಸವನ್ನೋ ರೇವಧರ್‌ನಲ್ಲಿ ಕಟ್ಟಡದ ಕೆಲಸವನ್ನೋ ಮಾಡುತ್ತಾರೆ. ನೂರಕ್ಕೆ ತೊಂಬತ್ತರಷ್ಟು ಮಂದಿ ಪುರುಷರು ಕುಡಿಯುವ ಚಟಕ್ಕೆ ಬಿದ್ದಿದ್ದಾರೆ. ಮಕ್ಕಳಿಗೆ ಬೆಚ್ಚನೆಯ ಬಟ್ಟೆ ಇರದಿದ್ದರೂ ಸಹ ಇವರಿಗೆ ಕುಡಿತ ಇರಲೇಬೇಕು. ರೋಗಪೀಡಿತರ ಸಂಖ್ಯೆ ಬಹಳಷ್ಟಿದ್ದು ಕೆಲವರು ಏಡ್ಸ್‌ಗೂ ತುತ್ತಾಗಿದ್ದಾರೆ.

ಈಗಿನ ಶಾಲಾಭಿವೃದ್ಧಿ ಸಮಿತಿಯಲ್ಲಿ ಸಮರ್ಥರಾದ ಸದಸ್ಯರಿದ್ದಾರೆ. ಅವರಲ್ಲಿ ಬದ್ಧತೆ ಕಾಣಿಸುತ್ತಿದೆ. ಮಕ್ಕಳು ಒಳ್ಳೆಯ ಗುಣಮಟ್ಟದ ಶಿಕ್ಷಣವನ್ನು ಪಡೆಯುತ್ತಿರುವುದರಿಂದ ಮೀಠನ್‌ನ ಮುಂದಿನ ತಲೆಮಾರಿನ ಯುವಕರು ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಂಡು ಹೆಚ್ಚಿನ ಜವಾಬ್ದಾರಿಯುಳ್ಳ ನಾಗರಿಕರಾಗುತ್ತಾರೆಂದು ರಾಮ್‌ರಾಜ್ ನಂಬಿದ್ದಾರೆ. ನಿಧಾನವಾಗಿ ಪೋಷಕರಲ್ಲೂ ಅಕ್ಷರಜ್ಞಾನ ಉಂಟಾಗುತ್ತಿದೆ. ಕೇವಲ ಶೇಕಡ ಮೂವತ್ತು ಮಂದಿ ಮಾತ್ರ ಹೆಬ್ಬೆಟ್ಟು ಒತ್ತುವ ಅನಕ್ಷರಸ್ಥರಾಗಿ ಉಳಿದಿದ್ದಾರೆ. ಮೀಠನ್‌ನ ಶೇಕಡ ಎಪ್ಪತ್ತರಷ್ಟು ಹಳೆಯ ವಿದ್ಯಾರ್ಥಿಗಳು ವ್ಯಾಸಂಗವನ್ನು ಮುಂದುವರಿಸಿದ್ದಾರೆ. ಆದರೆ ಹುಡುಗಿಯರು ಮನೆಯ ಜವಾಬ್ದಾರಿ ಅಥವಾ ಮದುವೆ ಮುಂತಾದ ಕಾರಣಗಳಿಂದ ಶಿಕ್ಷಣವನ್ನು ಮುಂದುವರಿಸಲಾಗುತ್ತಿಲ್ಲ.

ರಾಮ್‌ರಾಜ್ ತಾನು ಒಬ್ಬ ಶಿಕ್ಷಕನಾಗಿ ಬೆಳೆದು ಬಂದ ಬಗ್ಗೆ ಒಂದು ಪುನರವಲೋಕನವನ್ನು ಮಾಡಿದರು, "ಹಿಂದೆ ನಾನು ಸಾಂಪ್ರದಾಯಿಕ ಕ–ಖ–ಗ ಶಿಕ್ಷಕನಾಗಿದ್ದೆ. ಪಾಠವನ್ನು ಯಾಂತ್ರಿಕವಾಗಿ ಕಂಠಪಾಠ ಮಾಡಿ ನೆನಪಿಟ್ಟುಕೊಳ್ಳುವಂತೆ ಮಕ್ಕಳಿಗೆ ಹೇಳುತ್ತಿದ್ದೆವು. ಆದರೆ ಈಗ ಭಾಷಾ ಬೋಧನೆಯ ಸಮಗ್ರ ಕಲಿಕಾ

ಪದ್ಧತಿಯನ್ನು ಅಳವಡಿಸಿಕೊಂಡು ಆ ಮೂಲಕ ಮಕ್ಕಳಿಗೆ ಭಾಷಾ ಬಳಕೆಯ ಸಕಲ ಸಾಮರ್ಥ್ಯಗಳನ್ನು ಕಲಿಸುವ ವಿಧಾನವನ್ನು ಉಪಯೋಗಿಸುತ್ತಿದ್ದೇವೆ. ಮಕ್ಕಳ ಭಾಷಾ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದಕ್ಕೆ ಕತೆಗಳನ್ನು ಬಳಸುವುದನ್ನೂ ಕಲಿತಿದ್ದೇನೆ." ನಾವು ಅಲ್ಲಿಂದ ಹೊರಡಲು ಅನುವಾದೆವು. ಮಕ್ಕಳು ಊಟ ಮುಗಿಸಿ ತಟ್ಟೆಗಳನ್ನು ತೊಳೆಯುತ್ತಿದ್ದರು. ಆಲದ ಮರದ ಸುತ್ತ ಆಟಗಳ ಭರಾಟೆ ಜೋರಾಗಿತ್ತು. ಕೆಲವು ಶಿಕ್ಷಕರು ಮಕ್ಕಳ ಆಟವನ್ನು ನೋಡುತ್ತ ನಿಂತಿದ್ದರು; ಅವರ ಮುಖದಲ್ಲಿ ನಸುನಗೆ ಸೂಸುತ್ತಿತ್ತು. ನಾವು ಹೊರಟದ್ದನ್ನು ನೋಡಿ ಕೆಲವು ಮಕ್ಕಳು ಸಮೀಪಕ್ಕೆ ಬಂದು ಮೀಠನ್‌ನಿಂದ ಬೆಂಗಳೂರಿಗೆ ಎಷ್ಟು ದೂರ ಎಂದು ಕೇಳಿದರು. ಒಬ್ಬನು "ರಸ್ತೆ ಮೂಲಕ ಹೋಗುತ್ತೀರಾ?" ಎಂದು ಕೇಳಿದ. "ಇಲ್ಲ, ಹವಾಯಿ ಜಹಾಜ್‌ನಲ್ಲಿ ಹೋಗುತ್ತೇವೆ" (ವಿಮಾನದಲ್ಲಿ) ಎಂದು ನಾವು ಉತ್ತರಿಸಿದೆವು. ಒಬ್ಬ ನಮಗೆ ವಿದಾಯ ಹೇಳುತ್ತ ಪ್ರಶ್ನಿಸಿದ, "ಮತ್ತೆ ಯಾವಾಗ ಬರುತ್ತೀರಿ?"